"ಅದಕ್ಕೆ ಉತ್ತರ ಸಿಗಬೇಕಾದರೆ, ನಾವು ಈ ಮೂವರನ್ನು ಭೇಟಿಯಾಗಬೇಕು."

ಸಂಜೆ ನಾವು ತನಿಖೆಯ ಮೊದಲ ಹಂತ ಆರಂಭಿಸಿದೆವು. ಮೂವರನ್ನೂ ಭೇಟಿಯಾಗಿ, ಹಿಂದಿರುಗುವಾಗ, ಗಂಟೆ ಎಂಟು ದಾಟಿತ್ತು. ಭೋಜನದ ವೇಳೆ, ಕರಮಚಂದ ತನಿಖೆಯ ವಿಮರ್ಶೆ ನಡೆಸಿದ.

"ಈ ಮೂರು ಮಂದಿ ಸಂತ್ರಸ್ತರಲ್ಲಿ ಇರುವಂತಹ ಸಾಮಾನ್ಯವಾದ ಅಂಶಗಳು, ಮೂವರೂ ಮನೆಯ ಹೊರಗಡೆಯೇ ಬೂಟುಗಳನ್ನು ಇರಿಸಿದ್ದರು. ಕಳ್ಳ ಕದಿಯಲು ಕಷ್ಟವೇನೂ ಪಡಬೇಕಾಗಿರಲಿಲ್ಲ. ಎರಡನೆಯದು, ಮೂವರೂ ಹೊಸತಾಗಿ ಬೂಟು ಖರೀದಿಸಿದವರು. ಅಂದರೆ ಸುಮಾರು ಒಂದು ತಿಂಗಳಿನಿಂದೀಚೆ ಶೂ ತೆಗೆದುಕೊಂಡಿದ್ದವರು. ಮೂರನೆಯ ಸಂಗತಿಯೆಂದರೆ, ಮೂರು ಶೂಗಳೂ ನಿಕ್ ಎನ್ನುವ ಕಂಪನಿಯ ಸೆನೆಟರ್ ಎನ್ನುವ ಬ್ರಾಂಡಿನದ್ದು!"

"ಹೌದು. ಆದರೆ, ಆ ಕಳ್ಳನಿಗೆ ಆ ಬ್ರಾಂಡಿನ ಶೂಗಳೇ ಯಾಕೆ ಬೇಕು?"

"ಬಿದ್ದಪ್ಪ, ಇನ್ನೊಂದು ಕೌತುಕದ ಸಂಗತಿ ಗಮನಿಸಿದೆಯಾ? ಆ ಮೂವರು ವ್ಯಕ್ತಿಗಳೂ ಒಂದೇ ಎತ್ತರದವರು. ಅರ್ಥವಾಯ್ತೇ? ಆ ಮೂರು ಶೂಗಳೂ ಎಂಟು ನಂಬರ್‌ನ ಅಳತೆಯವು!"

"ಹೌದೇ? ನಾನು ಗಮನಿಸಲಿಲ್ಲ. ಹಾಗಿದ್ದರೆ ಕಳ್ಳನ ಎತ್ತರವೂ ಅದೇ ಆಗಿರಬಹುದೇ?"

"ಹೇಳುವಂತಿಲ್ಲ. ಆತ ಧರಿಸಲು ಕದ್ದವನಾಗಿದ್ದರೆ, ಯಾಕೆ ಒಂದೇ ಕಾಲಿನದ್ದು ಒಯ್ಯುತ್ತಿದ್ದ?"

ಕರಮಚಂದನ ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ.

"ಬಿದ್ದಪ್ಪ, ವಿರಾಜಪೇಟೆಯಲ್ಲಿ ನಿಕ್ ಶೂ ಕಂಪನಿಯ ಎಷ್ಟು ಅಧಿಕೃತ ಮಳಿಗೆಗಳಿವೆಯೆಂದು ಗೂಗಲ್‌ನಲ್ಲಿ ಹುಡುಕು."

ವಿರಾಜಪೇಟೆಯಲ್ಲಿ ಇದ್ದಿದ್ದು ಎರಡೇ. ಸರಕಾರಿ ಬಸ್ ನಿಲ್ದಾಣದ ಸಮೀಪದಲ್ಲೊಂದು. ಇನ್ನೊಂದು, ಜೈನ್ ರಸ್ತೆಯಲ್ಲಿ.

"ನಾವು ಆ ಷೋರೂಮುಗಳಲ್ಲಿ ವಿಚಾರಿಸೋಣ."

"ಏನನ್ನು?"

"ಸೆನೆಟರ್ ಬ್ರಾಂಡಿನ ಶೂಗಳು ಮಾರುಕಟ್ಟೆಗೆ ಬಂದು ಆರು ತಿಂಗಳಾಗಿದೆ ಅಂತ ಗೂಗಲ್ ಹೇಳುತ್ತೆ. ಈಗಾಗಲೇ ಅನೇಕರು ಆ ಮಾದರಿಯ ಶೂ ಖರೀದಿಸಿದ್ದಿರಬಹುದು. ಹಾಗಿದ್ದರೂ, ಕಳವಾದುದೆಲ್ಲವೂ ಹೊಸ ಶೂಗಳು. ಇದನ್ನು ಕೇವಲ ಕಾಕತಾಳೀಯ ಅನ್ನಲಾಗದು. ಷೋರೂಮಿನಲ್ಲಿ ವಿಚಾರಿಸಿದರೆ, ಶೂ ಖರೀದಿಸಿದವರ ವಿವರ ಸಿಗುತ್ತದೆ. ಕಳ್ಳನ ಮುಂದಿನ ಗುರಿ ಯಾರೆಂಬುದನ್ನು ನಾವು ಮೊದಲೇ ಊಹಿಸಬಹುದು!"

ಈಗ ಶೂ ಅಂಗಡಿಯವರೂ ಗ್ರಾಹಕರ ಮೊಬೈಲ್ ಸಂಖ್ಯೆ, ವಿಳಾಸ ಪಡೆದುಕೊಳ್ಳುವುದು ಮಾಮೂಲು. ಅಂಗಡಿಯಲ್ಲಿ ನಡೆಸಿದ ತನಿಖೆಯಿಂದ ಹೊರಬಿದ್ದ ಸಂಗತಿಗಳಿಷ್ಟು. ಒಟ್ಟಾರೆ, ಮೂರು ತಿಂಗಳಿನಿಂದೀಚೆ, ಸೆನೆಟರ್ ಮಾದರಿಯ ಹದಿಮೂರು ಶೂಗಳಷ್ಟೇ ಮಾರಾಟವಾಗಿದ್ದವು. ಬಸ್ ನಿಲ್ದಾಣದ ಸನಿಹದ ಅಂಗಡಿಯಾತ ಹತ್ತು ಶೂಗಳನ್ನು ಮಾರಿದ್ದರೆ, ಉಳಿದದ್ದನ್ನು ಜೈನ್ ರಸ್ತೆಯಲ್ಲಿದ್ದಾತ ವಿಕ್ರಯಿಸಿದ್ದ. ಗಿರಾಕಿಗಳ ವಿವರಗಳೆಲ್ಲವೂ ದೊರಕುವುದರೊಂದಿಗೆ, ಇನ್ನೊಂದು ಕುತೂಹಲಕಾರಿ ವಿಷಯ ತಿಳಿದು ಬಂತು. ಅವುಗಳಲ್ಲಿ ಎಂಟು ನಂಬರ್‌ನ ಅಳತೆಯವು ಹನ್ನೊಂದು! ಸೆನೆಟರ್ ಶೂಗಳು ಹೆಚ್ಚು ಜನಪ್ರಿಯವಾಗದಿರಲು, ಅದರ ಹಿಮ್ಮಡಿ ತುಸು ಎತ್ತರವಾಗಿರುವುದೇ ಕಾರಣವಂತೆ! ಈ ಸಂಗತಿಯನ್ನು ಸಂಶೋಧಿಸಿದವನು ಶಿವದಾಸ್ ಎನ್ನುವಾತ! ಆತ ಕೆಲವು ಗ್ರಾಹಕರನ್ನು ಸಂದರ್ಶಿಸಿ, ಈ ವಿಚಾರ ಕಂಡುಕೊಂಡನೆಂದು ಬಸ್ ನಿಲ್ದಾಣದ ಸಮೀಪದ ಅಂಗಡಿಯಾತ ಹೇಳಿದ. ಅವನು 'ಯುವಕರಲ್ಲಿ ಶೂ ಧರಿಸುವಿಕೆ' ಎಂಬ ವಿಷಯದಲ್ಲಿ ಪಿಎಚ್.ಡಿ.